ನಾಗರಾಜನಿಗೆ ಮದುವೆಯಾಗಿ, ಮುಂದೆ ಮಗ ಹುಟ್ಟಿ, ಮನೆಯೊಳಗೆ ತೊಟ್ಟಿಲು ತೂಗತೊಡಗಿದಾಗ ಚಿಕ್ಕಿ, ಚಿಕ್ಕಪ್ಪ ಹತಾಶೆಯ ಪರಮಾವಧಿ ತಲುಪಿಬಿಟ್ಟಿದ್ದರು. ಮದುವೆಯಾಗಿ ಹತ್ತು ವರ್ಷ ಕಳೆದರೂ ಅಮೃತಾ ತಾಯಿಯಾಗಿರಲಿಲ್ಲ. ಈ ಕೊರಗು ಕುಟ್ಟೆಹುಳದಂತೆ ಚಿಕ್ಕಿಯನ್ನು ಒಳಗೊಳಗೇ ಕೊರೆದು ಲಡ್ಡು ಮಾಡಿತ್ತು. ತೌರಿಗೆ ಬಂದ ಅಮೃತಾ, "ನಾಗಣ್ಣಾ..'' ಎನ್ನುತ್ತಾ ಓಡಿ ಬಂದು ಇವನ ಮಗನನ್ನು ಎತ್ತಿಕೊಂಡರೆ, ಅಪ್ಪಿ ಮುದ್ದಾಡಿದರೆ ಚಿಕ್ಕಿಯ ಮನಸ್ಸಿಗೆ ಗೀರುತ್ತಿದ್ದುದು ಅವರ ವರ್ತನೆಯಿಂದಲೇ ತಿಳಿಯುತ್ತಿತ್ತು ನಾಗರಾಜನಿಗೆ. ಇಂತಾ ಒಂದು ಸಂದರ್ಭದಲ್ಲಿ ಹುಡುಗಾಟಿಕೆಯಿಂದೆಂಬಂತೆ ಕೇಳಿದ್ದಳು ಅಮೃತಾ,

"ನಾಗಣ್ಣಾ, ಏನೋ ಒಂದು ಕೇಳ್ತೀನಿ, ಕೊಡ್ತೀಯಾ?"

"ನೀನು ಕೇಳೋದು ಹೆಚ್ಚೋ, ನಾನು ಕೊಡೋದು ಹೆಚ್ಚೋ? ತಲೆ ಕಡಿದು ಮುಂದಿಡು ಅಂದ್ರೂ ರೆಡಿ ನಾನು..."

"ನಾಟಕದ ಮಾತು ಆಡ್ಬೇಡ. ನಿನ್ನ ಮಗನ್ನ ಕೊಡ್ತೀಯಾ ನಂಗೆ?"

"..."

"ನೋಡಿದ್ಯಾ, ಬಾಯಿಗೆ ಕಡುಬು ತುಂಬ್ಕೊಂಡ್ಹಂಗೆ ತೆಪ್ಪಗಾಗ್ಬಿಟ್ಟೆ..."

ಅದ್ಯಾವ ವಿಧಿ ನಾಲಿಗೆಯಲ್ಲಿ ಆವಾಹನೆಯಾಗಿ ಮಾತಾಡಿಸಿತೋ, ನಾಗರಾಜ ಹೇಳಿದ್ದ,

"ಇದನ್ನ ಕೊಡು ಅಂದ್ರೆ ಕಷ್ಟ ಆಗುತ್ತೆ ಕಣೇ. ಚೊಚ್ಚಲು ಮಗು. ನಿಂಗೋಸ್ಕರ ಇನ್ನೊಂದು ಹೆತ್ತು..."

ಅಮೃತನ ಕಣ್ಣುಗಳು ಹೊಳೆದಿದ್ದುವು.

"ಸತ್ಯಕ್ಕಾರೂ?" ಕೇಳಿದ್ದಳು ಅಮೃತಾ.

"ಸತ್ಯಕ್ಕಾರೂ...'' ಮಾತಿನ ಕೊನೆಯಲ್ಲಿ ನಾಲಿಗೆ ತಡವರಿಸಿದಂತಾಗಿ ಅಲ್ಲೇ ಸುಳಿದಾಡಿಕೊಂಡಿದ್ದ ಸೀತೆಯ ಮುಖ ನೋಡಿದರೆ ಹೊತ್ತು ಕಳೆಯಲು ಅಣ್ಣ, ತಂಗಿಯರಾಡುತ್ತಿರುವ ಸಲಿಗೆಯ ಮಾತು ಎನ್ನುವಂತೆ ಅವಳು ನಸುನಗುತ್ತಿದ್ದಳು. ಇಷ್ಟೇ, ಇಷ್ಟೇ ನಡೆದಿದ್ದು. ಇದು ಸದರದ ಮಾತೇ ಆಗಬಹುದಿತ್ತು. ಆದರೆ, ಅಮೃತಾ ಅದನ್ನು ಗಂಭೀರವಾಗಿ ಯಾಕೆ ತೆಗೆದುಕೊಂಡಳೋ ಗೊತ್ತಿಲ್ಲ. ಅವಳು ತೆಗೆದುಕೊಂಡಳೋ, ಅಥವಾ ಚಿಕ್ಕಿ ತಿದಿ ಊದಿ ಕಿಡಿಯನ್ನು ಜ್ವಾಲೆಯಾಗಿಸಿದಳಾ? ಈ ಹುಡುಗಾಟಿಕೆಯ ಮಾತು ಅವಳ ಕಿವಿಯವರೆಗೆ ಹೋಗಿತ್ತಾ? ಗೊತ್ತಿಲ್ಲ.

★★★

ಚಿಕ್ಕಪ್ಪ ಜಮೀನು, ಮನೆ ಮಾರಿಕೊಂಡು ಹುಟ್ಟಿ ಬೆಳೆದ ಹಳ್ಳಿಗೆ ವಿದಾಯ ಹೇಳುವಾಗ ಸೀತೆ ಇನ್ನೂ ಎರಡನೆಯ ಗರ್ಭ ಹೊತ್ತಿರಲಿಲ್ಲ. ಚಿಕ್ಕಪ್ಪನ ಒಂದು ಎಕರೆಯ ಅಡಿಕೆತೋಟ ಏಳು ಲಕ್ಷಕ್ಕೆ ಪರಭಾರೆಯಾಗಿತ್ತು. ರಿಜಿಸ್ಟ್ರೇಷನ್ ಹೊತ್ತಿಗೆ ಅಮೃತಾ ಕೂಡಾ ಬಂದಿದ್ದಳು, ಸಹಿ ಹಾಕಲು. ಅಣ್ಣನ ಮನೆಯಲ್ಲಿ ಪರಮಾನ್ನದ ಊಟದೊಡನೆ ಬೀಳ್ಕೊಡುಗೆ.

"ಇದೂ ನಿನ್ನ ತೌರುಮನೆ ಕಣೇ. ಯಾವಾಗ ಬರ್ಬೇಕು ಅನ್ನಿಸಿದ್ರೂ ಹೇಳ್ದೆ ಕೇಳ್ದೆ ಬಾ..."

"ಅದನ್ನ ನೀನು ಬಾಯ್ಬಿಟ್ಟು ಹೇಳ್ಬೇಕಾ?" ಅಮೃತಾ ಕಣ್ತುಂಬಿಕೊಂಡಿದ್ದಳು. ಶಾಶ್ವತವಾಗಿ ಒಂದು ನಿಕಟ ಸಂಬಂಧ ದೂರವಾಗುತ್ತಿರುವಾಗ ತನಗೆ ತಡೆದುಕೊಳ್ಳಲಾಗದಷ್ಟು ಸಂಕಟವಾಗುತ್ತದೆ ಅಂದುಕೊಂಡಿದ್ದ ನಾಗರಾಜ. ಹಾಗೇನಾಗಿರಲಿಲ್ಲ. ಅವರೆಲ್ಲರನ್ನೂ ಹೊತ್ತಿದ್ದ ಕಾರು ಕಣ್ಣಿಂದ ಮರೆಯಾಗುತ್ತಿದ್ದಂತೆ, ಮಗ ಅಂಬೆಗಾಲಿಕ್ಕಿಕೊಂಡು ಬಂದು 'ಎತ್ತಿಕೋ...' ಎನ್ನುವುದನ್ನು ಕಣ್ಣಭಾಷೆಯಲ್ಲೇ ಹೇಳುತ್ತಾ ಕಾಲು ತಬ್ಬುತ್ತಿದ್ದಂತೆ, ಸೀತೆ ತುದಿಬೆರಳುಗಳಲ್ಲಿ ಬಿಸಿಕಾಫಿಯ ಲೋಟ ಹಿಡಿದು ಬರುತ್ತಿದ್ದಂತೆ 'ನನ್ನ ಜಗತ್ತು ಇದು' ಎನ್ನುವ ಭಾವ ಮೇಲುಗೈಯಾಗಿ, ತಮ್ಮ ತಮ್ಮ